ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

ಸಿ.ಸಿ.621/2022

| | | |
|---|---|---|
| ಸಾಕ್ಷಿದಾರರ ಹೆಸರುಃ | ಶರಣಪ್ಪ | ಪ್ರಮಾಣ ವಚನ ಭೋದಿಸಿದ ದಿನಾಂಕಃ |
| | | 01-03-2024 |
| ತಂದೆಯ/ಗಂಡನ ಹೆಸರುಃ | ಈರಲಿಂಗಪ್ಪ | ಸಿ.ಡಬ್ಲ್ಯೂಃ 19 |
| ವಯಸ್ಸುಃ | 35 ವರ್ಷ | ಪಿ.ಡಬ್ಲ್ಯೂಃ 2 |
| ಉದ್ಯೋಗಃ | ವ್ಯವಸಾಯ | |
| ವಾಸಸ್ಥಳಃ | ಅವಳಿಹಟ್ಟಿ | |

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಆರೋಪಿ ಪರಿಚಯ ಇದೆ, 2 ನೇ ಆರೋಪಿ ಚೌಡಪ್ಪ ಬಗ್ಗೆ ಗೊತ್ತಿಲ್ಲ. ಚಾಸಾ-1, 20 ಮತ್ತು 21 ರವರ ಪರಿಚಯ ಇಲ್ಲ. ಮೃತ ಚಿತ್ತಪ್ಪ ರವರ ಪರಿಚಯ ಇಲ್ಲ. ನಾನು 2 ವರ್ಷದ ಹಿಂದೆ ಅವಳಿಹಟ್ಟಿ ಯಿಂದ ಹೊಳಲ್ಕೆರೆಗೆ ಬರುತ್ತಿರುವಾಗ ಪೊಲೀಸರು ತಡೆದು ನಿಲ್ಲಿಸಿ ಪೋಟೋ ತೆಗೆದುಕೊಂಡರು ಮತ್ತು ಅಲ್ಲಿ ಬೇರೆ ಜನ ಇದ್ದು ಅವರು ಗೊತ್ತಿಲ್ಲ. ನನ್ನ ಸಹಿಯನ್ನು ದಾಖಲೆಗೆ ಪಡೆದುಕೊಂಡರು. ಈಗ ನನಗೆ ತೋರಿಸಿದ ಅಪರಾಧ ವಿವರ ನಮೂನೆ ಯನ್ನು ಗುರುತಿಸಿದ್ದು ನಿಪಿಃ 3 ಎಂದು, ಸಹಿಯನ್ನು ನಿಪಿಃ 3 ಎ ಎಂದು ಗುರುತಿಸಲಾಯಿತು. ಪೋಟೋಗಳನ್ನು ನಿಪಿಃ 4 ಮತ್ತು 5 ಎಂದು ಕ್ರಮವಾಗಿ ಗುರುತಿಸಲಾಯಿತು ಪೋಟೋದಲ್ಲಿ ಕಾಣಿಸಿದಂತೆ ನನಗೆ ಕೈ ತೋರಿಸು ಎಂದು ಹೇಳಿದರು ಅದಕ್ಕೆ ತೋರಿಸಿದ್ದೇನೆ, ಯಾವ ವಿಚಾರಕ್ಕೆ ಎಂದು ಪೊಲೀಸರು ಹೇಳಲಿಲ್ಲ ಮತ್ತು ನಾನು ಕೇಳಲಿಲ್ಲ. ಆದ್ದರಿಂದ ನಿಪಿಃ 3 ರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಚಿತ್ತಪ್ಪ ಯಾವ ಕಾರಣಕ್ಕೆ ಮೃತ ಪಟ್ಟರು ಎಂದು ಗೊತ್ತಿಲ್ಲ. ಪೋಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ದಿಃ 04-03-2021 ರಂದು ಸಂಜೆ 7 ಗಂಟೆ ಸಮಯದಲ್ಲಿ ನಾನು ಬೈಕಿನಲ್ಲಿ ಹೊಳಲ್ಕೆರೆ

ಟೌನಿನಿಂದ ಹೋಗುತ್ತಿದ್ದಾಗ ಹೊಳಲ್ಕೆರೆ ಅವಳಿಹಟ್ಟಿ ರಸ್ತೆ ಮಧ್ಯೆ ಶ್ರೀನಿವಾಸ ಅಯ್ಯಂಗಾರ್ ತೋಟದ ಬಳಿ ನನ್ನ ಮುಂದೆ ಯಾರೋ ಟ್ರಾಕ್ಟರ್ ಮತ್ತು ಟ್ರೈಲರ್ ಚಾಲಕನು ಅವಳಿಹಟ್ಟಿ ಗ್ರಾಮದಿಂದ ಅತೀವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿಕೊಂಡು ಹೊಳಲ್ಕೆರೆ ಕಡೆಗೆ ಬರುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಬೈಕಿನಲ್ಲಿ ಸವಾರಿ ಮಾಡುತ್ತಿದ್ದ ಮೂರು ಜನ ಕೆಳಗೆ ಬಿದ್ದರು, ಅದನ್ನು ನೋಡಿದ್ದೇನೆ ಎಂದರೆ ಸರಿಯಲ್ಲ.

ಟ್ರಾಕ್ಟರ್ ಚಾಲಕನು ಟ್ರಾಕ್ಟರ್ ಅಲ್ಲಿಯೆ ಬಿಟ್ಟು ಓಡಿ ಹೋದನು ಎಂದರೆ ಗೊತ್ತಿಲ್ಲ. ಅವನು ನಮ್ಮ ಗ್ರಾಮದ ನಿಂಗಪ್ಪ ತಂದೆ ಈರಪ್ಪ ಎಂದರೆ ನನಗೆ ಗೊತ್ತಿಲ್ಲ. ಬೈಕಿನಲ್ಲಿ ಸವಾರಿ ಮಾಡಿ ಅಪಘಾತಕ್ಕೊಳಪಟ್ಟ ಮೂರು ಜನರಾದ ಚಿತ್ತಪ್ಪ ತಂದೆ ನಾಗರಾಜ, ಆತನಿಗೆ ತಲೆಗೆ ತೀವ್ರ ಹೊಡೆತ ಬಿದ್ದು ಅಲ್ಲಿಯೆ ಮೃತ ಪಟ್ಟು, ಹಿಂಬದಿ ಸವಾರ ಮಧು ತಲೆಗೆ ಪೆಟ್ಟಾಗಿ ಬಿದ್ದಿದ್ದು ತೀವ್ರ ಪೆಟ್ಟಾಗಿದ್ದು, ಅಭಿ ತಂದೆ ಚಿತ್ತಪ್ಪ ಈತನ ಸೊಂಟ ಮತ್ತು ತೊಡೆ ಬಳಿ ತೀವ್ರ ಗಾಯ ಆಗಿದ್ದು, ನಾನು ಹತ್ತಿರ ಹೋಗಿ ನೋಡಿದ್ದೇನೆ ಎಂದರೆ ಸರಿಯಲ್ಲ. ಆದರೆ ಸದರಿ ವ್ಯಕ್ತಿಗಳು ನಮ್ಮ ಊರಿನವರು ಎಂದರೆ ಸರಿ . ಆದರೆ ಅಷ್ಟಾಗಿ ಪರಿಚಯ ಇಲ್ಲ ಎಂದು ನುಡಿಯುತ್ತಾರೆ. ಸದರಿ ಟ್ರಾಕ್ಟರ ನ ನೊಂದಣಿ ಸಂಖ್ಯೆ ಕೆಎ -48- ಟಿ -1365 ಎಂದರೆ ಗೊತ್ತಿಲ್ಲ. ಮೋಟಾರ್ ಸೈಕಲ್ ಸಂಖ್ಯೆ ಕೆಎ -16-ಇ ಕ್ಯೂ -5487 ಎಂದರೆ ನನಗೆ ಗೊತ್ತಿಲ್ಲ. ಟ್ರೈಲರ್ ಗೆ ನೋಂದಣಿ ಸಂಖ್ಯೆ ಇರಲಿಲ್ಲ ಎಂದರೆ ಗೊತ್ತಿಲ್ಲ.

ಸದರಿ ವ್ಯಕ್ತಿಗಳನ್ನು ಯಾವುದೋ ಒಂದು ವಾಹನದಲ್ಲಿ ಚಿಕಿತ್ಸೆಗೆ ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ಮಧು ಎನ್ನುವವರು ಸಂಜೆ 7-50 ರಲ್ಲಿ ಮೃತ ಪಟ್ಟಿದ್ದು, ಅಭಿ ಈತನು ದಿಃ 04-03-2021 ರಂದು ರಾತ್ರಿ 9-10 ರ ಸಮಯದಲ್ಲಿ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯಲ್ಲಿ ಮೃತ ಪಟ್ಟಿದ್ದಾಗಿ ನನಗೆ ಗೊತ್ತಾಗಿ, ನಿಪಿಃ 2 ರ ಸ್ಥಳ ಪಂಚನಾಮೆಗೆ ನಾನೇ ಸ್ಥಳ ತೋರಿಸಿದ್ದು, ಆ ಪ್ರಕಾರ ಪೊಲೀಸರು ನಿಪಿಃ 3 ರನ್ನು ತಯಾರಿಸಿದ್ದು, ಪಂಚರಾದ ರಾಜಪ್ಪ ಮತ್ತು ಈರಪ್ಪ ರವರು ಕೂಡ ನಮ್ಮ ಊರಿನವರಾಗಿದ್ದು, ನಾವೆಲ್ಲಾ ಓದಿ ನೋಡಿ ನಮ್ಮ ಮಾಹಿತಿ ಆಧಾರದ ಮೇಲೆ ನಿಪಿಃ 3 ನ್ನು ತಯಾರಿಸಿದ್ದು, ಅದೇ ಸಮಯದಲ್ಲಿ ನಿಪಿಃ 4 ಮತ್ತು 5 ರ ಪೋಟೋ ತೆಗೆದಿದ್ದು ಅದು ನನಗೆ ಗೊತ್ತಿದ್ದರೂ ಸಹ ಆರೋಪಿ ನಮ್ಮ ಊರಿನವರಾದ್ದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ ಓದಿ ತೋರಿಸಿದ ಹೇಳಿಕೆಯನ್ನು ದಿಃ 05-03-2021 ರಂದು ನಾನೇ ಹೇಳಿದ್ದು ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ಓದಿ ತೋರಿಸಲಾಗಿ ಸಂಪೂರ್ಣವಾಗಿ ಅಲ್ಲಗಳೆದಿದ್ದು ಸದರಿ ಭಾಗವನ್ನು ನಿಪಿಃ 6 ಎಂದು ಗುರುತಿಸಲಾಯಿತು. ನಾನು ಆ ರೀತಿ ಹೇಳಿಕೆ ನೀಡಿದ್ದರೂ ಸಹ ಹೇಳಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವೃತ್ತ ನಿರೀಕ್ಷಕರಾದ ಕೆ ಎನ್ ರವೀಶ ರವರು ಪ್ರತ್ಯಕ್ಷದರ್ಶಿಯಾದ ನನ್ನನ್ನು ಮತ್ತು ಚಾಸಾ-1 ರವರನ್ನು ವೃತ್ತ ಕಚೇರಿಗೆ ಕರೆಸಿ ಅಪಘಾತ ಪಡಿಸಿದ ಚಾಲಕನನ್ನು ಪತ್ತೆ ಹಚ್ಚಿದ್ದಾಗಿ, ಆತನನ್ನು ಗುರುತಿಸಲು ಹೇಳಿದ್ದು ಅದರಂತೆ ನಾನು ಮತ್ತು ಚಾಸಾ-1 ಇಬ್ಬರು ಸಹ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಗುರುತಿಸಿದ್ದು, ಅವರ ಹೆಸರು ನಿಂಗಪ್ಪ ತಂದೆ ಈರಪ್ಪ, ಅಪಘಾತ ಪಡಿಸಿದ ಚಾಲಕ ಎಂದು, ಆತನ ತಪ್ಪಿನಿಂದ ಅಪಘಾತ ಆಗಿದೆ ಎಂದು ಆತನನ್ನು

ಗುರುತಿಸಿದ್ದಾಗಿ, ಮತ್ತು ಮುಂದೆ ಗುರುತಿಸುವುದಾಗಿ, ಈಗ ಓದಿ ತೋರಿಸಿದ ದಿಃ 04-01-2022ರ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ಸಾಕ್ಷಿ ಸಂಪೂರ್ಣವಾಗಿ ಅಲ್ಲಗಳೆದ ಕಾರಣ ನಿಪಿಃ 7 ಎಂದು ಗುರುತಿಸಲಾಯಿತು. ನಾನು ಅಪಘಾತವನ್ನು ಕಣ್ಣಾರೆ ಕಂಡು, ಪಂಚನಾಮೆಗೆ ಸಹಕರಿಸಿ, ಆರೋಪಿಯನ್ನು ಗುರುತಿಸಿದ್ದರೂ ಸಹ ಆರೋಪಿ ನಮ್ಮ ಊರಿನವರಾದ್ದರಿಂದ ಶಿಕ್ಷೆಯಾಗಬಾರದು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿಃಇಲ್ಲ ಎಂದು ನುಡಿಯುತ್ತಾರೆ .</u>**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ತಕ್ಕಂತ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಹೊಳಲ್ಕೆರೆ.